

ಅವರ ನಟನೆಗಾಗಲಿ, ವೃತ್ತಿಬದುಕಿಗಾಗಲಿ ಸಂಬಂಧಿಸಿದ್ದಲ್ಲ. ಅದರಾಚೆಯ ಸಾಮಾಜಿಕ ಜವಾಬ್ದಾರಿಯ ಕುರಿತು ಮಾತನಾಡುವಾಗ ಅವರ ಮಾತಿನಲ್ಲಿ ವಿಷಾದ ಇಣುಕುತ್ತದೆ.

'ಸಾಮಾಜಿಕ ಜವಾಬ್ದಾರಿ ಎನ್ನುವುದು ಎಲ್ಲರಲ್ಲಿಯೂ ಇರಬೇಕಾದ ಅಂಶ ಅಲ್ಲವೇ? ಎಷ್ಟೋ ಸಲ ನನಗೆ ಮಾತ್ರ ಇವೆಲ್ಲವೂ ಯಾಕೆ ಬೇಕು? ನಾನೇ ಯಾಕೆ ಇಷ್ಟೆಲ್ಲ ತಲೆಕೆಡಿಸಿಕೊಳ್ಳುತ್ತಿದ್ದೇನೆ? ಎಂಬ ಪ್ರಶ್ನೆಗಳು ಕಾಡುತ್ತವೆ. ಪೊಲಿಟಿಕಲಿ ಕರೆಕ್ಟ್ ಆಗುವುದು ಇಂದಿನ ಅಗತ್ಯ ಎನ್ನುವ ಹಾಗಾಗಿದೆ. ಒಂದು ಕಥೆಯಲ್ಲಿ ನಾಯಕಿಯ ಪಾತ್ರವನ್ನು ಇನ್ನಷ್ಟು ಶಕ್ತಗೊಳಿಸಬಹುದಿತ್ತಲ್ಲವೇ ಎಂದು ಕೇಳಿದರೆ ಎಷ್ಟೋ ಸಲ ನಾನು ಆ ಸಿನಿಮಾದಲ್ಲಿ ನಟಿಸುವ ಅವಕಾಶವನ್ನು ಕಳೆದುಕೊಳ್ಳಬೇಕಾಗುತ್ತದೆ. ಕೊನೆಗೂ ನನ್ನ ಕರಿಯರ್‌ಗಿಂತ ಇವೆಲ್ಲವೂ ಮುಖ್ಯವೇ ಎಂದು ಅನಿಸಿಬಿಡುತ್ತದೆ. ಹಾಗೆಂದು ನಾವು ನಂಬಿರುವುದನ್ನೆಲ್ಲ ಮರೆತು, ಪೊಲಿಟಿಕಲಿ ಕರೆಕ್ಟ್ ಆಗುವುದೂ ಸಾಧ್ಯವಿಲ್ಲ. ನಾನು ಬೆಳೆದು ಬಂದ ವಾತಾವರಣ, ನನ್ನ ಶಿಕ್ಷಣ ಎಲ್ಲವೂ ಕೆಲವು ಮೌಲ್ಯಗಳನ್ನು ನನ್ನ ಮನಸಲ್ಲಿ ತುಂಬಿವೆ. ಆ ಮೌಲ್ಯಗಳು ಒಳಗೊಳಗೇ ನನ್ನನ್ನು ಚುಚ್ಚುತ್ತಲೇ ಇರುತ್ತವೆ' ಎಂದು ಅಂತರಂಗದ ದ್ವಂದ್ವವನ್ನು ಮಾತುಗಳಲ್ಲಿ ಹಿಡಿಯಲು ಯತ್ನಿಸುತ್ತಾರೆ ಅವರು.

ಅಂದಹಾಗೆ ಹಲವು ವರ್ಷಗಳ ನಂತರ ಶ್ರದ್ಧಾ ಅಭಿನಯದ ಕನ್ನಡ ಸಿನಿಮಾ ಬಿಡುಗಡೆಯಾಗುತ್ತಿದೆ. 2019ರಲ್ಲಿ ಬಿಡುಗಡೆಯಾದ 'ರುಸ್ತುಂ' ಸಿನಿಮಾದಲ್ಲಿ ಅವರು ನಟಿಸಿದ್ದರೂ, ನೆನಪಿಡುವಂಥ ಪಾತ್ರವೇನೂ ಆಗಿರಲಿಲ್ಲ. 2017ರ 'ಆಪರೇಷನ್ ಅಲಮೇಲಮ್ಮ' ಸಿನಿಮಾವೇ ಶ್ರದ್ಧಾ ಅಭಿಮಾನಿಗಳ ಮನಸಲ್ಲಿ ಉಳಿದಿರುವ ಕೊನೆಯ ಸಿನಿಮಾ. ಈಗ ಅವರು ನಾಯಕಿಯಾಗಿರುವ 'ಡಿಯರ್ ವಿಕ್ರಮ್' ಸಿನಿಮಾ ಒಟಿಟಿ ವೇದಿಕೆ 'ವೂಟ್'ನಲ್ಲಿ ಬಿಡುಗಡೆಯಾಗುತ್ತಿದೆ. ನಂದೀಶ್ ನಿರ್ದೇಶನದ ಈ ಸಿನಿಮಾಗೆ ನೀನಾಸಂ ಸತೀಶ್ ನಾಯಕ.

'ಡಿಯರ್ ವಿಕ್ರಮ್' ಎಂದರೆ ಬಹುತೇಕರಿಗೆ ಗೊತ್ತಾಗಲಿಕ್ಕಿಲ್ಲ. ಯಾಕೆಂದರೆ ಈ ಸಿನಿಮಾ ಮೊದಲಿನಿಂದಲೂ ಪರಿಚಿತವಾಗಿದ್ದು, 'ಗೋಧ್ರಾ' ಎಂಬ ಹೆಸರಿನ ಮೂಲಕ. ಕೊನೆ ಗಳಿಗೆಯಲ್ಲಿ 'ಡಿಯರ್ ವಿಕ್ರಮ್' ಆಗಿ ಬದಲಾಗಿ ಬಿಡುಗಡೆಯಾಗುತ್ತಿದೆ.

'ನನಗೂ ಈ ಸಿನಿಮಾ ಎಂದಾಕ್ಷಣ ಮೊದಲು ಗೋಧ್ರಾ ಎಂಬ ಹೆಸರೇ ಮನಸಿಗೆ ಬರುತ್ತದೆ. ಆದರೆ ಆ ಹೆಸರು ವಿವಾದಕ್ಕೆ ಕಾರಣವಾಗಬಹುದು ಎಂಬ ಉದ್ದೇಶದಿಂದ 'ಡಿಯರ್ ವಿಕ್ರಮ್' ಎಂದು ಬದಲಾಯಿಸಲಾಯಿತು. ಈ ಹೆಸರು ಕೂಡ ಚೆನ್ನಾಗಿಯೇ ಇದೆ' ಎನ್ನುವ ಶ್ರದ್ಧಾ, 'ನೀವೇ ಹೇಳಿದ ಹಾಗೆ ಪೊಲಿಟಿಕಲಿ ಕರೆಕ್ಟ್ ಆಗುವ ಪ್ರಯತ್ನವಲ್ಲವೇ ಇದು?' ಎಂದು ಕೇಳಿದರೆ ಸುಮ್ಮನೆ ನಗುತ್ತಾರೆ.

ಈ ಸಿನಿಮಾ ಒಟಿಟಿಯಲ್ಲಿ ಬಿಡುಗಡೆಯಾಗುತ್ತಿರುವುದಕ್ಕೆ ಶ್ರದ್ಧಾಗೆ ಬೇಸರವೇನೂ ಇಲ್ಲ. 'ಮೊದಲಾದರೆ ಕೊಂಚ ಬೇಜಾರಾಗುತ್ತಿತ್ತು. ಆದರೆ ಈಗ ಎರಡು ವರ್ಷಗಳಲ್ಲಿ ಒಟಿಟಿಯಲ್ಲಿ ಸಿನಿಮಾ ನೋಡುವುದು ರೂಢಿಯಾಗಿಬಿಟ್ಟಿದೆ. ಅದು ನೆಗೆಟಿವ್ ಸಂಗತಿಯೇನೂ ಅಲ್ಲ. ತುಂಬ ಕಾಲದ ನಂತರ ಸಿನಿಮಾ ಬಿಡುಗಡೆಯಾಗುತ್ತಿರುವುದು ಸಾಕಷ್ಟು ಖುಷಿ ಕೊಟ್ಟಿದೆ. 'ವೂಟ್' ಆ್ಯಪ್ ಮೂಲಕ ಸಾಕಷ್ಟು ಪ್ರೇಕ್ಷಕರಿಗೆ ಸಿನಿಮಾ ತಲುಪುತ್ತದೆ ಎಂಬ ನಂಬಿಕೆಯೂ ಇದೆ' ಎನ್ನುತ್ತಾರೆ ಅವರು.

ಈ ಸಿನಿಮಾದಲ್ಲಿ ನಿತ್ಯಾ ಎಂಬ ಹುಡುಗಿಯ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. 'ಸುರಕ್ಷಿತ ಹಿನ್ನೆಲೆಯಿಂದ ಬಂದಿರುವ ಹುಡುಗಿ ನಿತ್ಯಾ. ಓದಿನಲ್ಲಿ, ಚರ್ಚಾಸ್ಪರ್ಧೆಗಳಲ್ಲಿ ಯಾವಾಗಲೂ ಮುಂಚೂಣಿಯಲ್ಲಿರುತ್ತಾಳೆ. ಪುಸ್ತಕದ ಜಗತ್ತಿನಲ್ಲಿಯೇ ಬೆಳೆದವಳು. ಅವಳಿಗೆ ವಿಕ್ರಮ್‌ನ ಪರಿಚಯವಾಗಿ ಅವನ ದೃಷ್ಟಿಕೋನದಿಂದಲೂ ಜಗತ್ತನ್ನು ನೋಡಲು ಪ್ರಾರಂಭಿಸುತ್ತಾಳೆ. ಆದರೆ ಈ ಆದರ್ಶಗಳೆಲ್ಲ ವಾಸ್ತವದ ಬದುಕಿಗೆ ಅನ್ವಯವಾದಾಗ ಏನಾಗುತ್ತದೆ ಎಂಬುದೇ ಸಿನಿಮಾ. ನಿರ್ದೇಶಕ ನಂದೀಶ್ ನಂಗೆ ತುಂಬ ಹಳೆಯ ಪರಿಚಯ. ಸತೀಶ್ ನನಗೆ ತುಂಬ ಇಷ್ಟದ ನಟ. ಈ ಕಾರಣದಿಂದ ನಾನು ಸಿನಿಮಾ ಒಪ್ಪಿಕೊಂಡೆ. ಈ ಸಿನಿಮಾದಲ್ಲಿ ಸಾಕಷ್ಟು ಲೊಕೇಶನ್‌ಗಳಿವೆ. ನಮ್ಮ ಪಾತ್ರಗಳು ಲುಕ್, ಗೆಟಪ್‌ಗಳೂ ಬೇರೆ ಬೇರೆ ಥರ ಇವೆ. ಹಾಗಾಗಿ ಹೆಚ್ಚು ಸಮಯ ತೆಗೆದುಕೊಂಡಿತು' ಎಂದು ಸಿನಿಮಾ ವಿವರಣೆ ನೀಡುತ್ತಾರೆ.

'ಡಿಯರ್ ವಿಕ್ರಮ್' ನಂತರ ರಿಷಭ್ ಶೆಟ್ಟಿ ನಿರ್ದೇಶನದ 'ರುದ್ರಪ್ರಯಾಗ' ಸಿನಿಮಾಗೆ ಶ್ರದ್ಧಾ ಸಹಿ ಹಾಕಿದ್ದರು. ಆದರೆ ಆ ಸಿನಿಮಾ ಸ್ಥಗಿತಗೊಂಡಿದೆ. ನಂತರ ಯಾವ ಕನ್ನಡ ಸಿನಿಮಾವನ್ನೂ ಅವರು ಒಪ್ಪಿಕೊಂಡಿಲ್ಲ. ಈ ಕುರಿತು ಕೇಳಿದರೆ ಮತ್ತದೇ ವಿಷಾದದ ನಗು ನಗುತ್ತಾರೆ. 'ಕನ್ನಡ ಸಿನಿಮಾದಲ್ಲಿ ನಟಿಸಬೇಕು ಎಂದು ನಾನೂ ಕಾತರದಿಂದ ಕಾಯುತ್ತಿದ್ದೇನೆ. ನಾನು ಕನ್ನಡದಲ್ಲಿ ನಟಿಸಿದಷ್ಟು ಚೆನ್ನಾಗಿ ಬೇರೆ ಯಾವ ಭಾಷೆಯಲ್ಲಿಯೂ ನಟಿಸಲು ಸಾಧ್ಯವಿಲ್ಲ. ಯಾಕೆಂದರೆ ಕನ್ನಡ ನನ್ನ ಮಾತೃಭಾಷೆ. ಬೇರೆ ಭಾಷೆಗಳಲ್ಲಿ ನಾನು ಹೆಚ್ಚುವರಿ ಶ್ರಮ ಹಾಕಬೇಕಾಗುತ್ತದೆ. ಆದರೆ ಕನ್ನಡದಲ್ಲಿ ಸುಲಭವಾಗಿ ಅರ್ಥಮಾಡಿಕೊಂಡು ನಟಿಸಬಲ್ಲೆ. ಕನ್ನಡದಲ್ಲಿ ಒಳ್ಳೆಯ ಸಿನಿಮಾಗಳು ಬರುತ್ತಿವೆ. ಆದರೆ ಆ ಒಳ್ಳೆಯ ಸಿನಿಮಾಗಳು ನನಗೆ ಸಿಗುತ್ತಿಲ್ಲ. ನನಗೆ ಎಕ್ಸೈಟ್ ಆಗದ ಸಿನಿಮಾಗಳಲ್ಲಿ ನಟಿಸಲಾರೆ. 'ಯೂ ಟರ್ನ್', 'ವಿಕ್ರಮ್ ವೇದ', 'ಜರ್ಸಿ' ಎಲ್ಲ ಸಿನಿಮಾಗಳೂ ಜನರಲ್ಲಿ ನಂಬಿಕೆ ಹುಟ್ಟಿಸಿವೆ. ಆ ನಂಬಿಕೆ ಉಳಿಸಿಕೊಂಡು ಹೋಗುವಂಥ ಸಿನಿಮಾಗಳನ್ನೇ ಮಾಡಬೇಕು. ಅಂಥ ಅವಕಾಶಕ್ಕಾಗಿ ಕಾಯುತ್ತಿದ್ದೇನೆ' ಎನ್ನುತ್ತಾರೆ.

ಹಾಗಾದರೆ ಸಿನಿಮಾ ಕಥೆ ಕೇಳುವಾಗ ನಿಮಗೆ ಎಕ್ಸೈಟ್ ಅನಿಸುವಂಥ ಅಂಶಗಳು ಯಾವವು ಎಂದು ಕೇಳಿದರೆ, 'ಕಥೆ ಮತ್ತು ತಂಡ' ಎಂದು ಅದರ ವಿವರಣೆಯನ್ನೂ ಕೊಡುತ್ತಾರೆ.

'ಮೊದಲು ನಾನು ಕಥೆಯೇ ಎಲ್ಲಕ್ಕಿಂತ ಮುಖ್ಯ ಎಂದು ನಂಬಿಕೊಂಡಿದ್ದೆ. ಆದರೆ, ಒಳ್ಳೆಯ ಕಥೆ ಎಂದು ಒಪ್ಪಿಕೊಂಡ ಹಲವು ಸಿನಿಮಾಗಳು ಬೇಗನೇ ನಿಂತು ಹೋದವು. ಈಗ ಅರ್ಥವಾಗಿದೆ, ಒಳ್ಳೆಯ ಕಥೆಯ ಜೊತೆಗೆ ಅದನ್ನು ತೆರೆಯ ಮೇಲೆ ತರುವ ಶಕ್ತ ತಂಡವೂ ಬೇಕು. ನಿರ್ಮಾಪಕನ ಬಳಿ ದುಡ್ಡಿದ್ದರೆ ಸಾಲದು, ಸಿನಿಮಾ ಪ್ರೀತಿ, ಅದನ್ನು ಪ್ರೇಕ್ಷಕರಿಗೆ ತಲುಪಿಸುವ ಅನುಭವವೂ ಇರಬೇಕು'



ಎಂಬುದು ಶ್ರದ್ಧಾ ಅನುಭವದ ಮಾತು.

ನಟನೆಯ ಜೊತೆಗೆ ಬರವಣಿಗೆ ಮತ್ತು ನಿರ್ದೇಶನದ ಕುರಿತೂ ಅವರಿಗೆ ಆಸಕ್ತಿ ಇದೆ. ಹಾಗೆಂದು ಆ ಕ್ಷೇತ್ರದಲ್ಲಿ ಸದ್ಯಕ್ಕೆ ತೊಡಗಿಕೊಳ್ಳುವ ಆಲೋಚನೆಯೇನೂ ಅವರಿಗಿಲ್ಲ. 'ಬರವಣಿಗೆ ಮತ್ತು ನಿರ್ದೇಶನಗಳಿಗೆ ಆಸಕ್ತಿ ಇದ್ದರೆ ಸಾಲದು, ಅಪಾರ ಅನುಭವ ಮತ್ತು ವ್ಯಾಮೋಹವೂ ಬೇಕು. ನನಗೆ ಆಸಕ್ತಿ ಇದೆ. ಆದರೆ ವ್ಯಾಮೋಹ ಇಲ್ಲ. ಇನ್ನಷ್ಟು ಅದರ ಬಗ್ಗೆ ತಿಳಿದುಕೊಳ್ಳಬೇಕು. ಆ ಕ್ಷೇತ್ರದಲ್ಲಿ ತೊಡಗಿಕೊಳ್ಳುವಷ್ಟು ಅನುಭವ ಗಳಿಸಿಕೊಂಡಿದ್ದೇನೆ ಎಂದು ಅನಿಸಿದಾಗ ನಿರ್ದೇಶನಕ್ಕೆ ಇಳಿಯಬಹುದು' ಎನ್ನುವ ಶ್ರದ್ಧಾ ಅವರಂಥ ಸೂಕ್ಷ್ಮ ಸಂವೇದನೆಯ ನಟಿಯನ್ನು ಉಳಿಸಿಕೊಳ್ಳುವುದು, ಬೆಳೆಸುವುದು ಕನ್ನಡ ಚಿತ್ರರಂಗದ ಅಗತ್ಯವೂ ಹೌದು. ಆದರೆ ಅಂಥ ಜವಾಬ್ದಾರಿ ಚಿತ್ರರಂಗದ ಮಂದಿಗೆ ಇದ್ದಿದ್ದರೆ, ಲೇಖನದ ಆರಂಭದಲ್ಲಿ ಉಲ್ಲೇಖಿಸಿದ ಹಾಗೆ ಶ್ರದ್ಧಾ ಮಾತಿನಲ್ಲಿ ದಣಿವಿನ ಛಾಯೆ ಇಣುಕುವ ಪ್ರಸಂಗವೇ ಬರುತ್ತಿರಲಿಲ್ಲವೇನೋ.

ಪ್ರತಿಕ್ರಿಯಿಸಿ: feedback@sudha.co.in